**ಓ ಎಸ್ ನಂಃ 19 /2015**
**ಪಿ.ಡಬ್ಲ್ಯೂಃ 2, ನಿಖಿತಾ**

ದಿನಾಂಕ :19-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀ GGK ವಕೀಲರಿಂದ

ದಾವೆಯ ಬಗ್ಗೆ ಮತ್ತು ದಾವಾ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ 1 ನೇ ಪ್ರತಿವಾದಿ ಶರಬಣ್ಣ ಇವರ ತಂದೆ ದೊಡ್ಡಪ್ಪ ಇವರಿಗೆ 3 ಜನ ಗಂಡು ಮಕ್ಕ,ಳು ಎಂದು ಗೊತ್ತಿದೆ, ಹೆಣ್ಣು ಮಕ್ಕ,ಳು ಎಷ್ಟು ಜನ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿಯವರಿಗೆ 7 ಜನ ಅಕ್ಕ- ತಂಗಿಯರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಯನಿವರ್ಸಿಟಿಯಲ್ಲಿ ಲಕ್ಚರರಾಗಿ ಕೆಲಸ ಮಾಡುತ್ತಾರೆ. ಸದರಿಯವರು ಯಾವಾಗ ಸೇವೆಗೆ ಸೇರಿದರು ಎಲ್ಲಿಎಲ್ಲಿ ಸೇವೆ ಮಾಡಿದರು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲಾ ನಾನು ಚಿಕ್ಕವಳು ಇದ್ದೆ ಎಂದು ಹೇಳುತ್ತಾರೆ. ಸದರಿಯವರು ಅಗಸ್ಟ 1966 ರಲ್ಲಿ ಸೇವೆಗೆ ಸೇರಿ 2004 ರ ವರೆಗೆ ಸೇವೆ ಮಾಡಿರುತ್ತಾರೆ ಎಂದರೆ ಹೌದು ಎಂದು ಹೇಳುತ್ತಾರೆ. ಈ ಅವಧಿಯಲ್ಲಿ ಅವರು ಪಡೆಯುತ್ತಿದ್ದ ಸಂಬಳ ಅವರ ಆದಾಯ ಮತ್ತು ಅವರು ಗಳಿಸಿದ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲಾ . ದಾವೆಯಲ್ಲಿ ಎಷ್ಟು ಜಮೀನುಗಳ ಬಗ್ಗೆ ದಾವೆ ಹಾಕಿದ್ದೇವೆ ಎಂದು ಕೇಳಲಾಗಿ ಸಾಕ್ಷಿ ಗೊತ್ತಿ ಲ್ಲ ಎಂದು ಹೇಳುತ್ತಾರೆ. ಸರ್ವೆ ನಂಬರ ಗೊತ್ತಾಗುತ್ತದೆ ಎಂದು ಹೇಳುತ್ತಾರೆ. ದಾವಾ ಹೊಲಗಳ ಒಟ್ಟು ವಿಸ್ತೀರ್ಣ ಎಷ್ಟು ಎಂದು ಕೇಳಲಾಗಿ ಸಾಕ್ಷಿ ನನಗೆ ಗೂತ್ತಾಗುವುದಿಲ್ಲ ಎಂದು ಹೇಳುತ್ತಾರೆ. ದಾವೆ ಹಾಕುವ ಮೊದಲು ದಾಖಲೆ ಗಳನ್ನು ನನ್ನ ತಾಯಿ ನೋಡಿದ್ದು ನಾನು ಸ್ವಲ್ಪ ದಾಖಲೆಗಳನ್ನು ನೋಡಿದ್ದೆ ಎಂದು ಹೇಳುತ್ತಾರೆ. ಸ.ನ. 123 ಹೊರತು ಪಡಿಸಿ ಉಳಿದ ಯಾವುದೇ ಜಮೀನುಗಳು ಪ್ರತಿವಾದಿ 1 ಇವರ ಪೂರ್ವಜರ ಹೆಸರಿನಲ್ಲಿ ಇರಲಿಲ್ಲಾ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಸ.ನ. 123 ಮತ್ತು ಸನ್ನತಿ ಯಲ್ಲಿರುವ ಒಂದು ಮನೆ ಇವು ಎರಡು ಮಾತ್ರ ನಮ್ಮ ಹಿರಿಯ ಆಸ್ತಿ ಎಂದು ಸೂಚಿಸುವುದು ಸರಿಯಲ್ಲ.

ಸ.ನ. 153/1 ( ದಾವಾ ಆಸ್ತಿ -1) ಮತ್ತು ಸ.ನ. 153 (ದಾವಾ ಆಸ್ತಿ - 10) ಇವು ಎರಡು ಆಸ್ತಿಗಳು 4 ನೆ ಪ್ರತಿವಾದಿ ಹೆಸರಿನಲ್ಲಿ ಇವೆ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಸ.ನ. 53 ಇದನ್ನು ಕೃಷಾಭಾಗ್ಯ ಜಲ ನಿಗಮದವರು ಸ್ವಾಧೀನ ಪಡೆದಿದ್ದು ಅದರ ಪರಿಹಾರ ಹಣವನ್ನು 4 ನೇ ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೂತ್ತಿಲ್ಲ ಎಂದು ಹೇಳುತ್ತಾರೆ. 1, 4 ಮತ್ತು 5 ನೇ ಪ್ರತಿವಾದಿಗಳ ನಡುವೆ ವಿಭಾಗ ಆಗಿದೆಯಾ ಎಂದು ಕೇಳಲಾಗಿ ಸಾಕ್ಷಿ ಮೊದಲಿಗೆ ಇಲ್ಲಾ ಎಂದು ಹೇಳಿ ನಂತರ ಅದರ ಬಗ್ಗೆ ಮಾಹಿತಿ ಇಲ್ಲಾ ಎಂದು ಹೇಳುತ್ತಾರೆ. ಸ.ನ. 111/1 ಇದು 1 ನೇ ಪ್ರತಿವಾದಿಯ ದೊಡ್ಡಪ್ಪ ಭೀಮಾಶಂಕರ ಇವರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹಳುತ್ತಾರೆ. ಸದರಿ ಸ್ವತ್ತನ್ನು

ಭೀಮಾಶಂಕರ ಇವರು 3 ನೇ ಪಾರ್ಟಿಗೆ ಮಾರಿದ್ದು ಅದನ್ನು ಶಾಂತಮಲ್ಲಪ್ಪ ಇವರ ಮಗಳು ಮಹಾನಂದಾ ಇವರು ಖರಿದಿ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಸದರಿ ಸ್ವತ್ತು ಪಿತ್ರಾರ್ಜಿತ ಸ್ವತ್ತು ಅಲ್ಲಾ ಅಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಸ.ನ. 111/3 ಇದು 1 ನೇ ಪ್ರತಿವಾದಿ ಹೆಸರಿಗೆ ಮೊದಲಿಗೆ ಇರಲಿಲ್ಲಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸ.ನ. 118 ಇದನ್ನು 1 ನೇ ಪ್ರತಿವಾದಿಯು 2009 ರಲ್ಲಿ 4 ನೇ ಪ್ರತಿವಾದಿ ಹೆಸರಿಗೆ ಖರಿದಿ ಮಾಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸ.ನ. 142 ಇದನ್ನು 4 ನೇ ಪ್ರತಿವಾದಿಯ ಲೇಔಟ ಮಾಡಿ ಪ್ಲಾಟ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಸ್ವತ್ತು ನಾನು ದಾವೆ ಹಾಕುವ ಮಾದಲೇ ಮಾ ರಾಟ ಆಗಿದ್ದು ಆಸ್ತಿತ್ವದಲ್ಲ ಇರಲಿಲ್ಲಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ದಾವಾ ಬಿ ಶೆಡೂಲನಲ್ಲಿ ತೋರಿಸಿರುವ ಮನೆ ಮತ್ತು ಪ್ಲಾಟಗಳು ಆ ಸ್ಥಳದಲ್ಲಿ ಇರುವ ಬಗ್ಗೆ ಮತ್ತು 1 ನೇ ಪ್ರತಿವಾದಿ ಹೆಸರಿನಲ್ಲಿ ಇರುವ ಬಗ್ಗೆ ನಾನು ಪರೀಶಿಲನೆ ಮಾಡಿಲ್ಲ ನನ್ನ ತಾಯಿ ನೋಡಿದ್ದಾರೆ ಎಂದು ಹೇಳುತ್ತಾರೆ. ದಾವಾ ಬಿ ಶೆಡೂಲನಲ್ಲಿ ತೋರಿಸಿರುವ ಜಯನಗರದ ಮನೆಯನ್ನು 1 ನೇ ಪ್ರತಿವಾದಿಯು ತನ್ನ ಸೇವಾ ಆದಾಯದಿಂ ದ 40X60 ಸೈಟ ಖರಿದಿಸಿ ಬ್ಯಾಂಕನಿಂದ ಲೋನ ಪಡೆದು ಮನೆ ಕಟ್ಟಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಮನೆ ಮೊದಲಿಗೆ 1 ನೇ ಪ್ರತಿವಾದಿಯ ತಂದೆ ಅಥವಾ ಅಜ್ಜನ ಹೆಸರಿನಲ್ಲಿ ಇರಲಿಲ್ಲಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಬಿ ಶೆಡೂಲನಲ್ಲಿ ತೋರಿಸಿರುವ 3 ಅಂತಸ್ತಿನ ಕಟ್ಟಡ ಮತ್ತು ಮನೆ ಓಕಳಿ ಪೂರ ಕ್ಯಾಂಪನಲ್ಲಿ ಅಸ್ತಿತ್ವದಲ್ಲಿ ಇಲ್ಲಾ ಎಂದರೆ ಸಾಕ್ಷಿ ಇದೆ ಎಂದು ಹೇಳುತ್ತಾರೆ. ಸದರಿ ಮನೆಯನ್ನು ನಾನು ನೋಡಿರುತ್ತೆನೆ ಎಂದು ಹೆಳುತ್ತಾರೆ. ಆ ಬಗ್ಗ ದಾಖಲೆ ಹಾಕಿರುವ ಬಗ್ಗೆ ನನಗೆ ಮಾಹಿತಿ ಇಲ್ಲಾ ಎಂದು ಹೇಳುತ್ತಾರೆ.

ದಾವಾ ಸಿ ಶೆಡೂಲನಲ್ಲಿ ತೋರಿಸಿರುವ ಬಂಗಾರದ ಬಳೆಗಳು,ಪಾಟಲಿ, ನೆಕಲೆಸ, ಬಾಜುಬಂದ ಚಪ್ಪಲಹಾರ ಮತ್ತು ಬೆಳ್ಳಿ ಸಾಮಗ್ರಿಗಳ ಬಗ್ಗೆ ದಾಖಲೆ ಹಾಕಿರುವ ಬಗ್ಗೆ ನನಗೆ ಮಾಹಿತಿ ಇಲ್ಲಾ. ಸದರಿ ಸ್ವತ್ತುಗಳನ್ನು ನನ್ನ ಸಮಕ್ಷಮದಲ್ಲಿ ಇವು ಹಿರಿಯ ಆಸ್ತಿಗಳು ಎಂದು ಕೊಟ್ಟಿಲ್ಲ ನನ್ನ ತಾಯಿ ಸಮಕ್ಷಮ ಕೊಟ್ಟಿರುವ ಬಗ್ಗೆ ನನಗೆ ಮಾಹಿತಿ ಇಲ್ಲಾ ಆದರೆ ನನ್ನ ಅಜ್ಜ ಆ ರೀತಿ ಹೇಳುತ್ತಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಸ್ವತ್ತುಗಳು 1 ನೇ ಪ್ರತಿವಾದಿ ತನ್ನ ಸೇವಾ ಆದಾಯದಿಂದ ಖರಿದಿ ಮಾಡಿದ ಸ್ವಂತ ವಸ್ತುಗಳು ಅವು ಯಾವುವು ಪಿತ್ರಾರ್ಜಿತ ಅಲ್ಲ ಎಂದರೆ ಸರಿಯಲ್ಲ. ದಾವಾ ಶೆಡೂಲ ಡಿ ಯಲ್ಲಿ ತೋರಸಿರುವ ಟೇಬಲ,ಫ್ಯಾನ,ಪಾತ್ರೆಗಳು ವಾಸಿಂಗ ಮಶಿನ, ಫ್ರಿಜ್ ಇತ್ಯಾದಿ ಪಿತ್ರಾರ್ಜಿತ ಎಂದು ತೋರಿಸಲು ದಾಖಲೆ ಯಾವುದು

ಹಾಕಿಲ್ಲ. ಸದರಿ ಸ್ವತ್ತುಗಳು ನನ್ನ ಅಜ್ಜ , ಮುತ್ತಜ್ಜನ ಕಾಲದಿಂದ ಇತ್ತಾ ಎಂದು ಕೇಳಲಾಗಿ ಅದು ನನಗೆ ಗೂತ್ತಿಲ್ಲ ಎಂದು ಹೇಳುತ್ತಾರೆ.

ನನ್ನ ತಂದೆ 2013 ರಲ್ಲಿ ತೀರಿಕೊಂಡಿರುತ್ತಾರೆ. ನಾನು ನನ್ನ ತಾಯಿ 1 ನೇ ಪ್ರತಿವಾದಿ ವಿರುದ್ದ ಜೀವನಾಂಶಕ್ಕೆ ದಾವೆ ಹಾಕಿದ್ದು ಅದರಲ್ಲಿ 1 ನೇ ಪ್ರತಿವಾದಿಯು ಜೀವನಾಂಶ ಕೊಡುತ್ತಿದ್ದು ಈಗ ಎಷ್ಟು ದಿನಗಳಿಂದ ಕೊಡುತ್ತಿಲ್ಲಾ ಎಂದು ಕೇಳಲಾಗಿ ಸಾಕ್ಷಿ ನನಗೆ ಗೊತ್ತಲ್ಲ ಎಂದು ಹೇಳುತ್ತಾರೆ. ಧಾರವಾಡ ನ್ಯಾಯಾಲಯದ ಆದೇಶದ ಪ್ರಕಾ ರ ಅವರು ಪ್ರತಿ ತಿಂಗಳು ನಮಗೆ ಜೀವನಾಂಶ ಕೊಡುತ್ತಿದ್ದಾರೆ ಎಂದರೆ ಸಾಕ್ಷಿ ಕೆಲಮೊಮ್ಮೆ ಕೊಡುತ್ತಿಲ್ಲ ಎಂದು ಹೇಳುತ್ತಾರೆ. ಸ.ನ. 153 ಮತ್ತು ಸ.ನ. 153/1 ಎರಡು ಒಂದೇ ಇದ್ದರು ನಾವು ಬೇರೆ ಬೇರೆ ಎಂದು ತಪ್ಪಾಗಿ ತೋರಿಸಿದ್ದವೆ ಅಂದರೆ ಸಾಕ್ಷಿ ಇಲ್ಲಾ ಎರಡೂ ಬೇರೆ ಎಂದು ಹೇಳುತ್ತಾರೆ. ನಾವು ಮತ್ತು 4 ಮತ್ತು 5 ನೇ ಪ್ರತಿವಾಗಳು ಸೇರಿಕೊಂಡು 1 ನೇ ಪ್ರತಿವಾದಿ ಹಾಗೂ ಅವರ ಮಕ್ಕಳ ವಿರುದ್ದ ಸುಳ್ಳು ದಾವೆ ಹಾಕಿದ್ದೇವೆ ಅಂದರೆ ಸರಿಯಲ್ಲ. ನನ್ನ ತಂದೆಯ ಆರೋಗ್ಯ ಸರಿ ಇಲ್ಲಾದಿದ್ದಾಗ ನಾನು ಮತ್ತು ನನ್ನ ತಾಯಿ ಇಬ್ಬರು ಅವರನ್ನು ಬಿಟ್ಟು ಹೋಗಿದ್ದು ಅವರು ನಮ್ಮ ಅನುಪಸ್ಥಿತ್ತಿಯಲ್ಲಿ ತೀರಿಕೂಂಡಿದ್ದಾರೆ ಎಂದರೆ ಸರಿಯಲ್ಲ. ಸ.ನ. 123/3 ಮತ್ತು 123/4 ಮತ್ತು 123 ಎಂದು ದಾವಾ ಎ ಶೆಡೂಲ ಆಸ್ತಿ ನಂಬರ 5, 6 ಮತ್ತು 9 ರಲ್ಲಿ ಪ್ರತ್ಯೇಕವಾಗಿ ತೋರಿಸಿದ್ದು ಆದರೆ ಅದೇಲ್ಲಾ ಒಂದೇ ಸ್ವ ತ್ತು ಎಂದರೆ ಸಾಕ್ಷಿ ಇಲ್ಲಾ ಎಂದು ಹೇಳು ತ್ತಾರೆ.

ಸ.ನ. 153 ರ ಬಾಬತ್ತು ಪರಿಹಾರದ ಹಣವನ್ನು 4 ನೇ ಪ್ರತಿವಾದಿ ಒಬ್ಬರೇ ಪಡೆದಿದ್ದು ಅರದಲ್ಲಿ 1 ನೇ ಪ್ರತಿವಾದಿ ಹಣವನ್ನು ಪಡೆದಿಲ್ಲಾ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಸ.ನ. 123 ಮತ್ತು ಸನ್ನತಿಯಲ್ಲಿ ಇರುವ ಮನೆಯಲ್ಲಿ ಮಾತ್ರ ನಮಗೆ ಹಕ್ಕು ಇದ್ದು, ಉಳಿದ ಆಸ್ತಿಗಳಲ್ಲಿ ಇಲ್ಲಾ ಅಂದರೆ ಸರಿಯಲ್ಲ. 1 ನೆ ಪ್ರತಿವಾದಿ ವಿರುದ್ಧ ದ್ವೇಷ ಸಾಧಿಸಲು ಸುಳ್ಳು ದಾವೆ ಹಾಕಿದ್ದೇವೆ ಅಂದರೆ ಸರಿಯಲ್ಲ.

1 ನೇ ಪ್ರತಿವಾದಿಯು ನೌಕರಿ ಸೇರಿದ 2 ವರುಷದಲ್ಲಿ ಅವರು ತಮ್ಮ ತಂದೆ ಹಾಗೂ ಅವರ ಸಹೋದರ ನಡುವೆ ಮೌಖಿಕ ವಿಭಾಗ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ನನಗೆ ಗೂತ್ತಿಲ್ಲ ಎಂದು ಹೇಳುತ್ತಾರೆ. ಆ ಪ್ರಕಾರ ತಮ್ಮ ಪಾಲಿಗೆ ಬಂದ ಸ್ವತ್ತುಗಳಲ್ಲಿ 1, 4 ಮತ್ತು 5 ನೇ ಪ್ರತಿವಾದಿಗಳು ಪ್ರತ್ಯಕವಾಗಿ ಅನುಭವಿಸುತ್ತಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೆಳೇತ್ತಾರೆ . ನನ್ನ ಪ್ರಮಾಣ ಪತ್ರ ದಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ .

ಓ ಎಸ್ ನಂಃ **19 /2015**
ಪಿ.ಡಬ್ಲ್ಯೂಃ **2,** ನಿಖಿತಾ

ಪಾಟಿ ಸವಾಲು :- ಶ್ರೀ **S N J 4** ಮತ್ತು **5** ನೇ ಪ್ರತಿವಾದಿ ಪರ ವಕೀಲರಿಂದ:

ನಾನು ಈಗ 2 ನೇ ವರ್ಷದ ಪದವಿ ಶಿಕ್ಷಣ ಪಡೆಯುತ್ತಿದ್ದನೆ. ನಾನು ಧಾರವಾಡದಲ್ಲಿ ವಾಸ ಇರುತ್ತನೆ. ನನ್ನ ತಂದೆ ತೀರಿಕೂಂಡ ನಂತರದಿಂದ ಧಾರವಾಡದಲ್ಲಿ ವಾಸ ಇದ್ದೇ. ಅದಕ್ಕೂ ಮೊದಲು ತಂದೆ ಜೊತೆ ಗುಲಬರ್ಗದಲ್ಲಿ ವಾಸ ಇದ್ದೆ. ಈ ದಾವೆಯನ್ನು ಯಾವ ವರ್ಷದಲ್ಲಿ ಹಾಕಿದ್ದೇವೆ ಅಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ದಾವೆಯನ್ನು ನನ್ನ ಅಜ್ಜ ಶರಬಣ್ಣ ಹಾಗೂ ಅವರ ಮಕ್ಕಳ ವಿರುದ್ಧ ಹಾಕಿದ್ದೇನೆ ಅಂದರೆ ಸರಿ. ದಾವಾ ಹೊಲಗಳು ಅವು ಯಾರ ಹೆಸರಿನಲ್ಲಿ ಇವೆ ಎಂದು ಹೇಳಲು ಆಗುವುದಿಲ್ಲ. ಸದರಿ ಸ್ವತ್ತಗಳು ನಮ್ಮ ಪೂರ್ವಜರ ಸ್ವತ್ತು ಎಂದು ಗೊತ್ತು ಆ ಬಗ್ಗೆ ನಾನು ದಾಖಲೆಗಳನ್ನು ನೋಡಿಲ್ಲ. ನನ್ನ ತಂದೆಗೆ ಒಬ್ಬ ಸಹೋದರ ಅವರ ಹೆಸರು ರವಿರಾಜ ಮತ್ತು ಒಬ್ಬ ಸಹೋದರಿ ಅವರು ಹೆಸರು ಶೋಭಾ. ಸದರಿ ರವಿರಾಜ ಮತ್ತು ಶೋಭಾ ಇವರು ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ದಾವೆ ಹಾಕಿದ ಬಗ್ಗೆ ನನಗೆ ಮಾಹಿತಿ ಇಲ್ಲಾ . ನನ್ನ ಅಜ್ಜ ಶರಬಣ್ಣ ಇವರ ತಂದೆ ಹೆಸರು ದೊಡ್ಡಪ್ಪ.

ನಾನು ವಾದ ಪತ್ರದಲ್ಲಿ ಈ ದಾವೆ ಹಾಕುವ ಮಾದಲು ಊರಿನಲ್ಲಿ ಹಿರಿಯರು ಸೇರಿದ್ದರು ಎಂದು ಹೇಳಿದ್ದು ಅದು ಯಾವಾಗ ಆಯಿತು ಮತ್ತು ಯಾರು ಯಾರು ಸೇರಿದ್ದರು ಎಂದು ಕೇಳಲಾಗಿ ನಾನು ಚಿಕ್ಕವಳಿದ್ದೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಜಮಿನುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ . ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದನೆಂದರೆ ಸರಿಯಲ್ಲ .

**( ಉಳಿದ ಪಾಟಿ ಸವಾಲಗಾಗಿ G G K ವಕೀಲರು ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ)**

ಮರು ವಿಚಾರಣೆಃ ಇಲ್ಲಾ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.